ಇದರ ಅರಿವು ಇರುವ ಗೋಕರ್ಣ ಮಂತ್ತು ಸುತ್ತಮುಂತ್ತಲಿನ ಹಳ್ಳಿಗಳ ಜನರು ಭೀತರಾಗಿ ಚಡಪಡಿಸುತ್ತಿದ್ದಾರೆ, ಕಳೆದ ಅಧಿವೇಶನದಲ್ಲಿ ಈ ಜ್ವಲಂತ ಸಮಸ್ಯೆಯ ಕುರಿತು ಸದನದಲ್ಲಿ ಪ್ರಸ್ತಾಪಿಸಿ, ಸರಕಾರದ ಗಮನವನ್ನು ಸೆಳೆದಾಗ್ಯೂ, ಸರಕಾರ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಜನತೆಯನ್ನು ವಿವಂಚನೆಗೊಳಪಡಿಸಿದೆ. ಈಗಲಾದರೂ ಗೋಕರ್ಣದ ಜನರನ್ನು ಆಪ್ತೇ ಅಲ್ಲ, ಅಲ್ಲಿಗೆ ಬಂದು ಹೋಗುವ ಮುಗ್ಧ ಯಾತ್ರಿಕರನ್ನೆಲ್ಲಾ, ಭೀಕರ ರೋಗಗಳ ದವಡೆಯಿಂದ ಪಾರು ಮಾಡಲು ಕೋಟಿ ತೀರ್ಥವನ್ನು ನಿರ್ಮಲಗೊಳಿಸುವ ತೀವ್ರ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಹೆಲ್ತ್ ಮಿನಿಸ್ಟರ್‌ರವರು ಸಭೆಯಲ್ಲಿ ಇಲ್ಲ ಅವರಿಂದ ವರದಿಯನ್ನು ತರಿಸಿ, ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

(೭) ಗೋಲುಗುಂಬಸ್‌ದ ಆವರಣದಲ್ಲಿದ್ದ ಹಿತ್ತಾಳೆ ದೀಪದ ಕಂಬಗಳು ಕಳುವಾಗಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಬಿಜಾಪುರ ನಗರದಲ್ಲಿಯ ಸುಪ್ರಸಿದ್ಧ ಗೋಲಗುಂಬಸ್‌ದ ಆವರಣದಲ್ಲಿರುವ ೧೬ನೇ ಶತಮಾನದ ಇಪ್ಪತ್ತಾರು ಹಿತ್ತಾಳೆ ದೀಪದ ಕಂಬಗಳು ಕಳುವಾಗಿದೆಯೆಂದು ತಿಳಿದುಬಂದಿರುತ್ತದೆ. ಭಾರತೀಯ ಪ್ರಾಚ್ಯ ವಸ್ತು ಸಂರಕ್ಷಣಾ ಇಲಾಖೆಯ ಉಪರಕ್ಷಣಾಧಿಕಾರಿಗಳು ಈ ದೂರನ್ನು ನೀಡಿದ್ದು, ಈ ದೀಪದ ಕಂಬಗಳು ಯಾರಿಂದ ಕಳವು ಮಾಡಲಾಗಿದೆ ಹಾಗೂ ಈ ದೀಪದ ಕಂಬಗಳನ್ನು ಇಷ್ಟೊಂದು ನಿರ್ಲಕ್ಷತೆಯಿಂದ ಇಟ್ಟಿದ್ದು ಎಲ್ಲಿ ? ಈ ಎಲ್ಲಾ ವಿಷಯಗಳ ಬಗ್ಗೆ ವಿಶೇಷ ವರದಿ ನೀಡುವಂತೆ ಪ್ರವಾಸೋದ್ಯಮ ಹಾಗೂ ಯುವಜನ ಇಲಾಖಾ ಮಂತ್ರಿಗಳ ಗಮನವನ್ನು ಸೆಳೆಯಲಾಗಿದೆ.

ಭಾರತೀಯ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿಯ ಸಂರಕ್ಷಣಾ ವಿಭಾಗದ ಬಗ್ಗೆ ವಿಶೇಷ ಗಮನ ಸೆಳೆಯುತ್ತಾ, ಪ್ರಾಚೀನ ವಸ್ತುಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಕೇಂದ್ರ ಸರಕಾರದ ಸಂಬಂಧಪಟ್ಟ ಇಲಾಖೆಗೆ ತೀವ್ರ ಸಂಪರ್ಕಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಕಳ್ಳತನ ಆಗಿರುವುದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಮೈಸೂರು ಅರಮನೆಗೆ ಸಂಬಂಧಪಟ್ಟ ಪ್ರಾಚ್ಯ ವಸ್ತು ವಿಷಯದಲ್ಲೂ ಸಹ ಕೇಂದ್ರ ಸಿ.ಬಿ.ಐ.ನವರು ತನಿಖೆ ನಡೆಸುತ್ತಿದ್ದಾರೆ ಎಂದು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಕೇಳಿದ್ದುದು ಮೈಸೂರಿನ ಬಗ್ಗೆ ಅಲ್ಲ, ಬಿಜಾಪುರದ ವಿಚಾರ.

ಶ್ರೀ ಬಿ. ರಾಚಯ್ಯ.—ಅದನ್ನು ವಿಚಾರಣೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ.

(೮) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತತವಾಗಿ ದರೋಡೆಗಳು ನಡೆದು ಹಲ್ಲೆಗೊಳಗಾದವರಿಗೆ ಪರಿಹಾರ ನೀಡುವುದು,

ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸತತ ದರೋಡೆಗಳು ನಡೆದು ಇಡೀ ಜಿಲ್ಲೆಯ ಜನರು ತತ್ತರಿಸಿದ ದಿನಗಳು ಕಳೆದು ಅತ್ಯಂತ ದಕ್ಷತೆಯ ಪೋಲೀಸರ ಕಾರ್ಯಾಚರಣೆಯಿಂದಾಗಿ, ದರೋಡೆಕೋರರ ತಂಡದ ಬಂಧನವಾಗಿ, ಈಗ ಪೋಲೀಸರನ್ನು ಅಭಿನಂದಿಸುವ ದಿನಗಳು ಪ್ರಾರಂಭವಾಗಿರುವುದು ಸಂತೋಷದ ವಿಷಯ. ಜಿಲ್ಲೆಯ ಜನರು ಸುಖ ಶಾಂತಿಯಿಂದ ನಿದ್ದೆ ಮಾಡುವ ನೆಮ್ಮದಿಯನ್ನು ಪಡೆದಿದ್ದಾರೆ. ದರೋಡೆಕೋರರ ಹೀನಕೃತ್ಯಗಳ ಕಥೆಗಳು ಪ್ರತಿದಿನ ಪತ್ರಿಕೆಗಳಲ್ಲಿ ಆಲೆ ಆಲೆಯಾಗಿ ಬರುತ್ತಿದ್ದು, ಎಲ್ಲರೂ ಕುತೂಹಲದಿಂದ ಅದನ್ನು ಓದುತ್ತಿದ್ದಾರೆ. ಆದರೆ ಈ ಎಲ್ಲಾ ಅಬ್ಬರದ ನಡುವೆ ವಿಷಾದನೀಯ ಉದಾಹರಣೆ ಬಂಟವಾಳದ ಸುಂದರಮೂಲ್ಯರ ಕುಟುಂಬಸ್ಥರ ಕಣ್ಣೀರು ಅಸಹನೀಯ.

ದರೋಡೆಕೋರರ ವಿಕೃತ ಮನೋವೃತ್ತಿಗೆ ತುತ್ತಾದ ಬಲಿಪಶುಗಳಲ್ಲಿ ಅನೇಕರು ಬಡ ಕುಟುಂಬದವರು. ಅದರಲ್ಲೂ ಕುಟುಂಬದ ಯಜಮಾನರ ಮೇಲೆಯೇ ತೀವ್ರ ಹಲ್ಲೆ ನಡೆದ ಪ್ರಕರಣಗಳೇ ಹೆಚ್ಚು. ಅಲ್ಲದೆ ಮನೆಯ ಹೆಂಗಸರು ಮತ್ತು ಮಕ್ಕಳ ಮೇಲೂ ತೀವ್ರತರದ ಹಲ್ಲೆಗಳು ನಡೆದಿವೆ. ಹಲ್ಲೆಗೊಳಗಾದ ಕುಟುಂಬಗಳಿಗೆ ಔಷಧೋಪಚಾರ ಸರಕಾರಿ ಆಸ್ಪತ್ರೆಯಲ್ಲಿ ದೊರಕಿದ್ದರೂ ಇನ್ನೂ, ಕೆಲವು ವಿಶೇಷ ಚಿಕಿತ್ಸೆಗಳನ್ನು ಖಾಸಗಿ ಆಸ್ಪತ್ರೆಯಲ್ಲಿ ಹಣ ಪಾವತಿ ಮಾಡಿ ಪಡೆಯಬೇಕಾಯಿತು.

ಚಿಕಿತ್ಸೆಗೆ ಹಣ ಅದರೊಂದಿಗೆ ದುಡಿಮೆಗೆ ಹೋಗಲೂ ಅಸಾಧ್ಯವಾಗಿ, ಈ ಕುಟುಂಬಗಳು ಅತ್ಯಂತ ಸಂಕಷ್ಟದ ಆರ್ಥಿಕ ಪರಿಸ್ಥಿತಿಯಲ್ಲಿ ಕಂಗೆಟ್ಟು ಹೋಗಿವೆ. ವಸ್ತು ಸ್ಥಿತಿಯನ್ನು ಮನಗಂಡು ಈ ಎಲ್ಲಾ ಕುಟುಂಬಗಳಿಗೆ, ಮಾಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಸೂಕ್ತ ಪರಿಹಾರವನ್ನು ಘೋಷಿಸಿ, ಈ ಬಳಲಿರುವ ಕುಟುಂಬಗಳಿಗೆ ನೈಜ ಸಾಂತ್ವನದ ಆಶ್ವಯ ನೀಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಸುಮಾರು ಐವತ್ತು ಲಕ್ಷ ಜನರ ಶಾಂತಿಗೆ ಭಂಗವನ್ನು ತಂದಿದ್ದಂಥ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಡಕಾಯಿತಿಯನ್ನು ಮಾಡಿದಂಥ, ಡಕಾಯತರನ್ನು ದರೋಡೆಕೋರರನ್ನು ಅಲ್ಲಿಯ ಸಾರ್ವಜನಿಕರ ಸಹಕಾರದಿಂದ ಅಲ್ಲಿಯ ಪೊಲೀಸರು ಹಿಡಿದಿರತಕ್ಕಂಥ ವಿಷಯದಲ್ಲಿ ಮಾನ್ಯ ಉಮರಬ್ಬರವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ, ಅವರಿಗೆ ನಾನು ಕೃತಜ್ಞನಾಗಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸಟ್ಟಿ ಎಂಬ ಸಬ್–ಇನ್ಸ್‌ಪೆಕ್ಟರ್‌ರವರನ್ನು, ಡ್ಯೂಟಿ ಮೇಲಿದ್ದಾಗ, ಸ್ಟ್ಯಾಬ್ ಮಾಡಿ ಕೊಂದು ಹಾಕಿದಾಗ ದಕ್ಷಿಣ ಕನ್ನಡ ಜಿಲ್ಲೆಯವರು ಬಹಳ ಉದಾರವಾಗಿ ದಾನ ಮಾಡಿ ನಾಲ್ಕು ಲಕ್ಷ ರೂಪಾಯಿಂಗಳವರೆಗೆ ಸಂಗ್ರಹ ಮಾಡಿ, ಅವರ ಕುಟುಂಬದವರಿಗೆ ಪುನರ್‌ವಸತಿ ಮಾಡುವುದಕ್ಕೆ ಸಹಕರಿಸಿದ್ದರು. ಈಗಲೂ ಕೂಡಾ, ದಕ್ಷಿಣ ಕನ್ನಡ ಜಿಲ್ಲೆಯ ಜನರು ಬಹಳ ಉದಾರಿಗಳು ಮತ್ತು ದಾನಿಗಳು ಆಗಿದ್ದು, ದೊಡ್ಡ ದೊಡ್ಡ ಬ್ಯಾಂಕುಗಳನ್ನು ಇಟ್ಟುಕೊಂಡಿರುವವರು, ಕೈಗಾರಿಕೆಗಳನ್ನು ಇಟ್ಟುಕೊಂಡಿರುವವರೂ ಆಗಿದ್ದಾರೆ. ದಯವಿಟ್ಟು ಮಾನ್ಯ ಉಮರಬ್ಬನವರು, ಅವರಿಂದ ಉದಾರವಾಗಿ ವಂತಿಗೆಯನ್ನು ಸಂಗ್ರಹಿಸುವುದಕ್ಕೆ ಸಹಕರಿಸಬೇಕು. ಈಗಾಗಲೇ ಅಲ್ಲಿ ಆಸ್ಪತ್ರೆಯಲ್ಲಿರತಕ್ಕಂಥವರಿಗೆ, ಅಲ್ಲಿನ ಲಯನ್ಸ್ ಕ್ಲಬ್‌ನವರು ಹಾಗೂ ನಮ್ಮ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರೂ ಕೂಡಿ, ಕೆಲವು ಸಹಾಯವನ್ನು ಮಾಡಿರುತ್ತಾರೆ. ಆದುದರಿಂದ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದೇ ತರಹ ಹೆಚ್ಚು ರೀತಿಯಲ್ಲಿ ಸಾರ್ವಜನಿಕರಿಂದ ವಂತಿಗೆಯನ್ನು ಕೊಡಿಸುವುದಾದರೆ ಅವರಿಗೆ ಮತ್ತೊಮ್ಮೆ ನಾನು ಅಭಾರಿಯಾಗುತ್ತೇನೆ, ಅಲ್ಲಿಂದ ಮಾಖ್ಯಮಂತ್ರಿಗಳ ಪರಿಹಾರ ನಿಧಿಗೆ ಏನಾದರೂ ತುಂಬಿಸಿದ್ದರೆ, ಏನಾದರೂ ಮಾಡುವುದಕ್ಕೆ ಸಾಧ್ಯ. ಈಗಾಗಲೇ ನಾನು ಬರೆದಿದ್ದೇನೆ. ಇಂತಹ ವಿಷಯಗಳಲ್ಲಿ, ಡಕಾಯಿತಿಗಳಲ್ಲಿ, ದರೋಡೆ ಪ್ರಕರಣಗಳಲ್ಲಿ, ಪ್ರತಿಯೊಬ್ಬರಿಗೂ ಪರಿಹಾರ ಕೊಡಬೇಕೆಂದರೆ ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳಿದ್ದೇನೆ. ವಂತಿಗೆಯನ್ನು ಸಂಗ್ರಹ ಮಾಡಿ ಏನಾದರೂ ಸಹಾಯ ಮಾಡುವುದಾಗಿದ್ದರೆ, ನಾನೂ ಅವರ ಜೊತೆ ಪಾದಯಾತ್ರೆ ಮಾಡುವುದಕ್ಕೆ ತಯಾರಾಗಿದ್ದೇನೆ.

(೯) ಕಾವಂಗಾರಿ ಇಲಾಖೆಯಲ್ಲಿ ರೋಡ್ ವೇಸ್ಕ್ರಿ, ಎಚ್. ಮಂಜಪ್ಪ ಎನ್ನುವವರು ತನ್ನ ಕೆಲಸ ಬಿಟ್ಟು ಬೇರೆ ಕೆಲಸ ಮಾಡುತ್ತಿರುವುದು,

ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಕಾವಂಗಾರಿ ಇಲಾಖೆಯ, ಕುಂದಾಪುರ ಸಬ್‌ಡಿವಿಜನ್‌ನ, ಹೆಚ್. ಮಂಜಪ್ಪ, ಎನ್ನುವವರ ಅಧಿಕಾರ ದುರುಪಯೋಗದ ಬಗ್ಗೆ, ಸಂಬಂಧಪಟ್ಟ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಕುಂದಾಪುರ ತಾಲ್ಲೂಕಿನ ಕುಂದಾಪುರ ಸಬ್ ಡಿವಿಜನ್‌ನ ಶಂಕರ ನಾರಾಯಣ ವಲಯದ ರೋಡ್ ಮೇಸ್ತ್ರಿಯಾದ ಹೆಚ್. ಮಂಜಪ್ಪ ಎನ್ನುವವರು ತನ್ನ ಕೆಲಸವನ್ನು ಬಿಟ್ಟು, ತಾಲ್ಲೂಕು ಆಫೀಸ್, ಬಿ.ಡಿ.ಓ. ಆಫೀಸ್‌ಗಳಲ್ಲಿ ತನ್ನ ತಮ್ಮ ಹೆಸರಿನಲ್ಲಿ ಪರಿಶಿಷ್ಟ ವರ್ಗದವರು ಅಕ್ರಮ ಮಾಡಿರುವ ಭೂಮಿಯನ್ನು, ಹಾಗೂ ಸರಕಾರದಿಂದ ಪರಿಶಿಷ್ಟ ವರ್ಗದವರಿಗೆ ಸಿಕ್ಕಿದ ಭೂಮಿಯನ್ನು ತನ್ನ ಪ್ರಭಾವ ಬೀರಿ ತಮ್ಮ ಸಂಬಂಧೀಕರಿಗೆ ಮಾಡಿಕೊಳ್ಳುವ ಯತ್ನ ಮಾಡಿರುತ್ತಾರೆ.

ಈ ಬಗ್ಗೆ ಪರಿಶಿಷ್ಟ ವರ್ಗದವರು, ಸೂಪರಿಂಟೆಂಡಿಂಗ್ ಎಂಜಿನಿಯರ್, ಮಂಗಳೂರು, ಎಕ್ಸಿಕ್ಯೂಟೀವ್ ಎಂಜಿನಿಯರ್ ಉಡುಪಿ, ಇವರಿಗೆ ಮನವಿ ಮಾಡಿದರೂ ಆ ಬಗ್ಗೆ ಸಂಬಂಧಪಟ್ಟ